# ಕರ್ನಾಟಕ ಸರ್ಕಾರ

**ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಶ್ರೀ ಮಿಂಟೋ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ದೂರವಾಣಿ ಸಂ:26709689,26706775 Email:endowmentcommissioner@gmail.com**

ಸಂಖ್ಯೆ:E: 181664: HRICE-ADM0ADM1/832/2023 ದಿನಾಂಕ: 03.09.2026

**-:ಪ್ರಕಟಣೆ:-**

**ವಿಷಯ:-** ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನವನ್ನು ಪಾವತಿಸುವ ಬಗ್ಗೆ.

******

ಈ ಕಛೇರಿಯ ನಡವಳಿ ಸಂಖ್ಯೆ:HRICE:ADM0ADM1/832/2023, ದಿನಾಂಕ:27/10/2023 ರನ್ವಯ 2026-2027ನೇ ಸಾಲಿಗೆ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯ ಅಧಿಸೂಚಿತ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು/ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ಪಾವತಿಸುವ ಸಲುವಾಗಿ ಅರ್ಹ ಅಭ್ಯರ್ಥಿಗಳ ಪೋಷಕರಿಂದ (ಅರ್ಚಕರು/ನೌಕರರು) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಶೈಕ್ಷಣಿಕ ಹಂತ | ಪ್ರೋತ್ಸಾಹ ಧನ |
|---|---|---|
| 1 | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | ರೂ.5,000/- |
| 2 | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | ರೂ.5,000/- |
| 3 | ಪದವಿ ಶಿಕ್ಷಣ | ರೂ.7,000/- |
| 4 | ಸ್ನಾತ್ತಕೋತ್ತರ ಪದವಿ ಶಿಕ್ಷಣ | ರೂ.15,000/- |
| 5 | ಇತರ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ, ಯುನಾನಿ) | ರೂ.25,000/- |
| 6 | ವೈದ್ಯಕೀಯ/ಡೆಂಟಲ್ ಶಿಕ್ಷಣ | ರೂ.50,000/- |
| 7 | ತಾಂತ್ರಿಕ ಶಿಕ್ಷಣ (ಇಂಜಿನೀಯರಿಂಗ್) | ರೂ.25,000/- |
| 8 | ವಿದೇಶ ವ್ಯಾಸಂಗ | ರೂ.1,00,000/- **(ಒಂದು ಬಾರಿಗೆ ಮಾತ್ರ)** |

ಅರ್ಜಿಗಳನ್ನು ಸಲ್ಲಿಸಲು ದಿನಾಂಕ:30/10/2026 ರ ಕೊನೆಯ ದಿನವಾಗಿದ್ದು, ಆಸಕ್ತರು ಅರ್ಜಿ ನಮೂನೆಗಳನ್ನು ಜಿಲ್ಲಾಧಿಕಾರಿಗಳ ಕಛೇರಿ (ಮುಜರಾಯಿ ಶಾಖೆ) /ತಾಲ್ಲೂಕು ತಹಶೀಲ್ದಾರ್ ರವರ ಕಛೇರಿಯಲ್ಲಿ ಮತ್ತು ಇಲಾಖೆಯ ಜಾಲತಾಣ (Website) https://itms.kar.nic.in/hrcehome/index.php ರಲ್ಲಿ ಪಡೆದು ದೃಢೀಕೃತ ದಾಖಲೆಗಳೊಂದಿಗೆ ಆಯಾಯಾ ತಾಲ್ಲೂಕು ಕಛೇರಿಯಲ್ಲಿ ದಿನಾಂಕ:30.10.2026 ರೊಳಗಾಗಿ ಸಲ್ಲಿಸಲು ತಿಳಿಯಪಡಿಸಿದೆ.

ಉಪ ಆಯುಕ್ತರು,
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.

**ಪ್ರತಿಯನ್ನು:-**

1 ಎಲ್ಲಾ ಜಿಲ್ಲಾಧಿಕಾರಿಗಳು,
2 ಸಹಾಯಕ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ನಗರ/ ಬೆಂಗಳೂರು ಗ್ರಾಮಾಂತರ / ಬೆಳಗಾವಿ / ಉತ್ತರ ಕನ್ನಡ / ದಕ್ಷಿಣ ಕನ್ನಡ / ಉಡುಪಿ / ಬಳ್ಳಾರಿ ಮತ್ತು ವಿಜಯನಗರ.
3 ಎಲ್ಲಾ ಪ್ರಮುಖ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
4 ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳು.
5 ಈ ಕಛೇರಿಯ ಪ್ರಕಟಣಾ ಫಲಕಕ್ಕೆ.

} ಈ ಪ್ರಕಟಣೆಯನ್ನು ಕಛೇರಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.

**ಕರ್ನಾಟಕ ಸರ್ಕಾರ**
**ಧಾರ್ಮಿಕ ದತ್ತಿ ಇಲಾಖೆ**

## ಅರ್ಜಿ ನಮೂನೆ-1

**(ವಿದ್ಯಾನಿಧಿ-ಅರ್ಚಕ / ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ಪಡೆಯಲು ಅರ್ಜಿ)**

**ವರ್ಷ:2026-27**

| | | |
|---|---|---|
| 1. | ಅರ್ಜಿದಾರರ ಹಸರು | |
| 2. | ಅರ್ಜಿದಾರರ ತಂದೆ/ ತಾಯಿಯ ಹೆಸರು | |
| 3. | ವಿಳಾಸ | |
| 4. | ಅರ್ಜಿದಾರರ ತಂದೆ/ ತಾಯಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರ/ ನೌಕರರ ದೇವಾಲಯದ ಹೆಸರು ಮತ್ತು ವಿಳಾಸ. | |
| 5. | ಅರ್ಜಿದಾರರು ಪ್ರಸಕ್ತ ಸಾಲಿನಲ್ಲಿ ಯಾವ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡು ತ್ತಿದ್ದಾರೆ. | |
| 6. | ಪ್ರಸ್ತುತ ಅರ್ಜಿದಾರರು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾ ಸಂಸ್ಥೆ ಹೆಸರು ಮತ್ತು ವಿಳಾಸ (ವಿದ್ಯಾಭ್ಯಾಸ ಮಾಡುತ್ತಿರುವ ಸಂಸ್ಥೆಯಿಂದ ವ್ಯಾಸಂಗ ಮಾಡುತ್ತಿರುವ ಬಗ್ಗೆ, ದೃಢೀಕರಣ ಲಗತ್ತಿಸುವುದು) | |
| 7. | ಅರ್ಜಿದಾರರು ಹಿಂದಿನ ವರ್ಷ ವ್ಯಾಸಂಗ ಮಾಡಿ ಉತ್ತೀರ್ಣರಾದ ಬಗ್ಗೆ / ದೃಢೀಕೃತ ಅಂಕಪಟ್ಟಿ ಲಗತ್ತಿಸುವುದು. | |
| 8. | ವಿದೇಶ ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಂಸ್ಥೆ/ಕಾಲೇಜಿನಿಂದ ನೀಡಿರುವ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು. | |
| 9. | ಅರ್ಜಿದಾರರ ಬ್ಯಾಂಕ್ ವಿವರ :-<br>ಅ) ಬ್ಯಾಂಕಿನ ಹೆಸರು ಮತ್ತು ವಿಳಾಸ.<br>ಆ) ಉಳಿತಾಯ ಖಾತೆ ಸಂಖ್ಯೆ<br>ಇ) IFSC ಕೋಡ್ ಸಂಖ್ಯೆ<br>ಈ) ಆಧಾರ್ ಸಂಖ್ಯೆ<br>(ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗಿರಬೇಕು) | |

**ಅರ್ಜಿದಾರರ ಸಹಿ**

## ಮುಚ್ಚಳಿಕೆ ಪತ್ರ

**(ವಿದ್ಯಾನಿಧಿ ಸಹಾಯಧನ)**

ಅರ್ಜಿದಾರರಾದ ............................ (ಆಧಾರ್ ಸಂಖ್ಯೆ:________________) ಶ್ರೀ / ಕುಮಾರಿ ..........................................ಇವರು ನನ್ನ ಮಗ / ಮಗಳಾದ ಇವರು ಸರ್ಕಾರದಿಂದ ನೀಡಲಾಗುವ ವಿದ್ಯಾನಿಧಿ ಸಹಾಯಧನಕ್ಕೆ ಅರ್ಹರಾಗಿದ್ದು. ಒಂದು ಅರ್ಜಿಯಲ್ಲಿ ನೀಡಿರುವ ಮಾಹಿತಿಯು ತಪ್ಪಾದಲ್ಲಿ, ಸರ್ಕಾರದಿಂದ ನೀಡಲಾಗುವ ವಿದ್ಯಾನಿಧಿ ಸಹಾಯಧನವನ್ನು ವಾಪಸ್ಸು ಮಾಡಲು ನನ್ನ ವೇತನದಿಂದ / ತಸ್ತೀಕ್ ಭತ್ಯೆಯಿಂದ ಕಟಾಯಿಸಿಕೊಳ್ಳಬಹುದಾಗಿದೆ. ಹಾಗೂ ಕಾನೂನು ರೀತ್ಯಾ ಕೈಗೊಳ್ಳಬಹುದಾದ ಕ್ರಮಕ್ಕೆ ಬದ್ಧನಾಗಿರುತ್ತೇವೆ ಎಂದು ಈ ಮೂಲಕ ಸಹಿ ಮಾಡಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

ಅರ್ಚಕ / ನೌಕರರ ಸಹಿ